# ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ 18-09-2022

## ಹುಲಸೂರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 62/2022 ಕಲಂ 78(3) ಕೆಪಿ ಕಾಯ್ದೆ :-

ದಿನಾಂಕ 16/09/2022 ರಂದು ಪಿಎಸ್ಐ ರವರು ಠಾಣೆಯಲ್ಲಿದ್ದಾಗ ಮಧ್ಯಾಹ್ನ 1500 ಗಂಟೆಯ ಸುಮಾರಿಗೆ ಫೋನ್ ಮೂಲಕ ಬಾತ್ಮಿ ಬಂದಿದೆನೆAದರೆ ಹುಲಸೂರ ಗ್ರಾಮದ ಶಿವಾಜಿ ಚೌಕ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಒಬ್ಬ ವ್ಯಕ್ತಿ ಮಟಕಾ ಜೂಜಾಟದ ಆದೃಷ್ಟದ ನಂಬರಗೆ 1 ರೂಪಾಯಿ ಹಚ್ಚಿ, ನೀವು ಹಚ್ಚಿದ ಆದೃಷ್ಟದ ನಂಬರ ಬಂದರೆ 1 ರೂಪಾಯಿಗೆ 80 ರೂಪಾಯಿಗಳು ಕೊಡುವುದಾಗಿ ಹೇಳಿ ಸಾರ್ವಜನಿಕರಿಂದ ಹಣ ಪಡೆದುಕೊಂಡು ಮಟಕಾ ಚೀಟಿ ಬರೆದುಕೊಡುತ್ತಿದಾನೆಂದು ಖಚಿತವಾದ ಮಾಹಿತಿ ಬಂದಿದ ಮೇರೆಗೆ ಸಿಬ್ಬಂದಿಯೊAದಿಗೆ ಹೋಗಿ ಹುಲಸೂರ ಗ್ರಾಮದ ಶಿವಾಜಿ ಚೌಕಕ್ಕಿಂತ ಸ್ವಲ್ಪ ಹಿಂದೆ ನಿಂತು ನಿಂತು ನೋಡಲು ಶಿವಾಜಿ ಚೌಕ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಒಬ್ಬ ವ್ಯಕ್ತಿ ಮುಂಬೈ ಕಲ್ಯಾಣ ಮಟಕಾದ ಆದೃಷ್ಟ ನಂಬರಗೆ ಹಣ ಹಚ್ಚಿದರೆ 1 ರೂಪಾಯಿಗೆ 80 ರೂಪಾಯಿ ಕೊಡುತ್ತೆನೆ ಅಂತ ಚಿರುತ್ತಾ ಸಾರ್ವಜನಿಕರಿಂದ ಹಣ ಪಡೆದುಕೊಂಡು ಮಟಕಾ ಚೀಟಿ ಬರೆದುಕೊಡುತ್ತಿರುವ ಬಗ್ಗೆ ನೋಡಿ ಖಚಿತಪಡಿಸಿಕೊಂಡು, ದಾಳಿ ಮಾಡಿ ಹಿಡಿದು ವಿಚಾರಿಸಲು ಸದರಿ ವ್ಯಕ್ತಿಯ ಹೆಸರು ಮತ್ತು ವಿಳಾಸ ವಿಚಾರಿಸಲು ಖಯೂಮ ತಂದೆ ಖದೀರ ಜಹಾಂಗೀರ ವಯ-28 ವರ್ಷ, ಜಾತಿ:ಮುಸ್ಲಿಂ ಉ: ಹೋಟೇಲ್‌ಕೆಲಸ ಸಾ: ಮರಾಠಗಲ್ಲಿ ಹುಲಸೂರ ಅಂತ ತಿಳಿಸಿರುತ್ತಾನೆ. ಮುಂದುವರೆದು ಖಯೂಮ ಈತನಿಗೆ ವಿಚಾರಿಸಲು ತಾನು ಸಾರ್ವಜನಿಕರಿಂದ ಹಣ ಪಡೆದುಕೊಂಡು 1 ರೂಪಾಯಿಗೆ 80 ರೂಪಾಯಿಗಳು ಕೊಡುವದಾಗಿ ಹೇಳಿ ಸಾರ್ವಜನಿಕರಿಂದ ಹಣ ಪಡೆದುಕೊಂಡು ಕಲ್ಯಾಣಿ ಮಟಕಾ ನಂಬರಿನ ಚೀಟಿ ಬರೆದುಕೊಳ್ಳುತ್ತಿರುವುದಾಗಿ ತಿಳಿಸಿರುತ್ತಾನೆ ಮತ್ತು ಮಟಕಾ ನಂಬರ ಬರೆದುಕೊಂಡ ಹಣ ಯಾರಿಗೆ ಕೊಡುತ್ತಿ ಅಂತ ಕೇಳಿದಾಗ ವಾರಕ್ಕೊಮ್ಮೆ 2000 ರಿಂದ 3000/- ರೂಪಾಯಿಗಳು ಜಮಾ ಆಗುತ್ತಿದ್ದು ಈ ಹಣವನ್ನು ನೀತಿನ ಜಾಧವ ಸಾ: ಶಹಾಜನಿ ಔರಾದ ಈತನು ವಾರಕ್ಕೊಮ್ಮೆ ಬಂದು ಹಣ ತೇಗೆದುಕೊಂಡು ಹೋಗುತ್ತಾನೆ ಅಥವಾ ನಾನು ಅವನು ಹೇಳಿದ ಸ್ಥಳಕ್ಕೆ ಹೋಗಿ ಹಣ ಕೊಡುತ್ತೇನೆ ಮತ್ತು ಅದರಲ್ಲಿ ಶೇ 15% ಹಣವನ್ನು ನೀತಿನ ಜಾಧವ ಈತನು ನನಗೆ ಕಮಿಷನ ರೂಪದಲ್ಲಿ ಕೊಡುತ್ತಾನೆಂದು ತಿಳಿಸಿರುತ್ತಾನೆ. ನಂತರ ನಾನು ಹಾಗು ಸಿಬ್ಬಂದಿಯವರು ಪಂಚರ ಸಮಕ್ಷಮ ಖಯೂಮ ಈತನ ಅಂಗ ಜಪ್ತಿ ಮಾಡಲಾಗಿ ಆತನ ಹತ್ತಿರ 1] ನಗದು ಹಣ 1560/- ರೂಪಾಯಿಗಳು 2] 3 ಮಟಕಾ ಚೀಟಿಗಳು 3] ಒಂದು ಕಪ್ಪು ಬಣ್ಣದ ಮೋಬಾಯಿಲ್ ಅ.ಕಿ 1500/- ರೂಪಾಯಿಗಳು 4] ಒಂದು ಬಾಲ ಪೆನ್ನ ಸಿಕ್ಕಿದ್ದು ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

## ಸಂತಪೂರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 93/2022 ಕಲಂ 32, 34 ಕೆ.ಇ. ಕಾಯ್ದೆ:-

ದಿನಾಂಕ 17/09/2022 ರಂದು 1700 ಗಂಟೆಗೆ ಪಿಎಸ್ಐ ರವರು ಪೆಟ್ರೋಲಿಂಗ ಕುರಿತು ಮತ್ತು ಹಳ್ಳಿ ಭೆಟ್ಟಿ ಕುರಿತು ಕಂದಗೂಳ ಕಡೆಗೆ ಹೋಗುವಾಗ ಖಚಿತ ಮಾಹಿತಿ ಬಂದಿದೆನೆಂದರೆ ಸೋರಳ್ಳಿ ಗ್ರಾಮದ ಚರ್ಚ ಹತ್ತಿರ ಒಬ್ಬ ವ್ಯಕ್ತಿ ಒಂದು ಬಿಳಿಬಣ್ಣದ ಚೀಲದಲ್ಲಿ ಅಕ್ರಮವಾಗಿ ಸರಾಯಿ ಮಾರಾಟ ಮಾಡುತಿದ್ದಾನೆ ಅಂತ ಖಚಿತ ಬಾತ್ಮಿ ಬಂದಿದ ಮೇರೆಗೆ ಸೋರಳ್ಳಿ ಚರ್ಚ ಹತ್ತಿರ ಸ್ವಲ್ಪ ದೂರದಲ್ಲಿ ಹೋಗಿ ನೋಡಿದಾಗ ಒಬ್ಬ ವ್ಯಕ್ತಿ ತನ್ನ ಹತ್ತಿರ ಒಂದು ಪ್ಲಾಸ್ಟಿಕ್ ಚೀಲ ಇಟ್ಟುಕೊಂಡು ಅಕ್ರಮವಾಗಿ ಸರಾಯಿ ಪಾಕೆಟಗಳು ಮಾರಾಟ ಮಾಡುವದನ್ನು ನೋಡಿ ಖಾತ್ರಿ ಪಡಿಸಿಕೊಂಡು 1800 ಗಂಟೆಗೆ ಸದರಿ ವ್ಯಕ್ತಿಯ ಮೇಲೆ ನಮ್ಮ ಪಂಚರ ಸಮಕ್ಷಮ ದಾಳಿ ಮಾಡಿ ಹಿಡಿದು ಹೆಸರು ಮತ್ತು ವಿಳಾಸ ವಿಚಾರಿಸಲಾಗಿ ಸದರಿಯವನು ತನ್ನ ಹೆಸರು ಘಾಳೆಪ್ಪಾ ತಂದೆ ಗಣಪತರಾವ ಸೂರ್ಯವಂಶಿ ವ. 60 ವರ್ಷ ಜಾ/ ಮರಾಠ ಉ/ ಕೂಲಿ ಸಾ/ ಸೋರಳ್ಳಿ ಅಂತ ತಿಳಿಸಿದನು. ಪಂಚರ ಸಮಕ್ಷಮ ಚೀಲವನ್ನು ಪರಿಶೀಲಿಸಿ ನೋಡಲು ಅದರಲ್ಲಿ ಸರಾಯಿ ತುಂಬಿದ ಟೆಟ್ರಾ ಪಾಕೆಟಗಳಿದ್ದು ಅವುಗಳು ಹೊರಗೆ ತೆಗೆದು ನೋಡಲು 1) 90 ಎಮ್.ಎಲ್ ವುಳ್ಳ 22 ಒರಜೀನಲ ಚಾಯ್ಸ ವಿಸ್ಕಿ ಸರಾಯಿ ಟೆಟ್ರಾ ಪ್ಯಾಕೆಟ್ ಒಂದಕ್ಕೆ 35.13 ಪೈಸ ಒಟ್ಟು ಅ.ಕಿ 772.86-/ರೂಪಾಯಿ ಬೆಲೆಬಾಳುವುದು.2) 180 ಎಮ್.ಎಲ್ ವುಳ್ಳ 15 ಓಲ್ಡ್ ಟವರಿನ್ ವಿಸ್ಕಿ ಸರಾಯಿ ಟೆಟ್ರಾ ಪಾಕೆಟ್ ಒಂದಕ್ಕೆ 86.70 ಪೈಸ ಒಟ್ಟು ಅ.ಕಿ 1300.5-/ರೂಪಾಯಿ ಬೆಲೆವುಳ್ಳ ಸರಾಯಿ ಟೆಟ್ರಾ ಪಾಕೆಟ್ಗಳು ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.